# ಕೊವಿಡ್ 19ಗೆ ಸಂಬಂಧಪಟ್ಟಂತೆ ಕಾರ್ಖಾನೆ ಹಾಗೂ ಕಾರ್ಯ ಸ್ಥಳಗಳಲ್ಲಿ ಸುರಕ್ಷತೆ ಕುರಿತು ಮಾರ್ಗಸೂಚಿ.

## ಪ್ರಸ್ತಾವನೆ

ಒಂದು ಅಂದಾಜಿನಂತೆ ಕೊವಿಡ್ 19 ಮಹಾಮಾರಿಯು ಇನ್ನೂ ಸ್ವಲ್ಪ ಕಾಲ ಮುಂದುವರೆಯುವ ಲಕ್ಷಣಗಳಿವೆ ಆದುದರಿಂದ ಇದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ. ಇದರ ದುಷ್ಪರಿಣಾಮ ನಮ್ಮ ದಿನನಿತ್ಯದ ವ್ಯಾಪಾರ ವಹಿವಾಟಿನ ಮೇಲೆ ಆಗದಂತೆ ನೋಡಿಕೊಳ್ಳಬೇಕಾಗಿದೆ. ಕಾರ್ಮಿಕರು ಹಾಗೂ ಗ್ರಾಹಕರು ಈ ಮಹಾಮಾರಿ ಖಾಯಿಲೆಗೆ ತುತ್ತಾಗದಂತೆ ನೋಡಿಕೊಳ್ಳಬೇಕಾಗಿದೆ.

ಕೋವಿಡ್ 19 ಖಾಯಿಲೆ ಹರಡದಂತೆ ತಡೆಯಲು ನಿಯೋಜಕರು ಘಟಕಗಳ ಪ್ರಮುಖರು ಹಾಗೂ ಮಾಲೀಕರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ (MOHFW ) ರಾಜ್ಯ ಸರಕಾರದಿಂದ ವಿಶೇಷವಾಗಿ ಗುರುತಿಸಲಾದ ಪ್ರದೇಶಗಳು , WPHDCI, ASSOCHAN, F1CCI, CII ಹಾಗೂ NASSCOM ಮುಂತಾದ ಸಂಸ್ಥೆಗಳ ವೆಬಸೈಟ್‌ಗಳಲ್ಲಿ ಬರುವ ವಿಶೇಷ ಸೂಚನೆಗಳನ್ನು ಆಧರಿಸಿ ಖಾಯಿಲೆಯು ಹರಡದಂತೆ ತಡೆಯುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಈ ವಿಷಯದಲ್ಲಿ ಆಡಳಿತ ಮಂಡಳಿಯು ನೌಕರರ ಸಂಘಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಮೂಹಿಕ ಪ್ರಯತ್ನ ಮಾಡಬೇಕು. ಕಾರ್ಮಿಕರು ಹಾಗೂ ಅವರ ಪ್ರತಿನಿಧಿಗಳನ್ನು ಮುಖ್ಯವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತದನಂತರ ಒಂದು ಮಾರ್ಗಸೂಚಿಯನ್ನು ಸಿದ್ಧಪಡಿಸಿ ಕಾರ್ಯಯೋಜನೆ ಹಾಕಿಕೊಳ್ಳಬೇಕು.

- ನಿಖರವಾದ ವಹಿವಾಟು ಹಾಗೂ ಕಾರ್ಯಸ್ಥಳಗಳನ್ನು ಗುರುತಿಸುವುದು.
- ಕೋವಿಡ್ 19 ಹರಡಬಹುದಾದ ಸ್ಥಳಗಳನ್ನು ಗುರುತಿಸುವುದು.
- ಖಾಯಿಲೆ ಹರಡುವುದನ್ನು ತಡೆಗಟ್ಟಲು ಕ್ರಮ.
- ಕಾರ್ಮಿಕರಿಗೆ ಒಬ್ಬರಿಂದ ಇನ್ನೊಬ್ಬರಿಗೆ ಹರಡದಂತೆ ಕ್ರಮ ಕೈಗೊಳ್ಳುವುದು.
- ವ್ಯಾಪಾರ ವಹಿವಾಟು ಮಾಡುವ ಸ್ಥಳದಲ್ಲಿ ಆರೋಗ್ಯಕರ ವಾತಾವರಣ ಇರುವಂತೆ ನೋಡಿಕೊಳ್ಳುವುದು.

# ಕೋವಿಡ್ 19 ಒಂದು ಪಕ್ಷಿನೋಟ

ಕೋವಿಡ್ 19 ಮಹಾಮಾರಿ ಖಾಯಿಲೆಗೆ ತುತ್ತಾದ ರೋಗಿಗಳು ಸಾಮಾನ್ಯವಾಗಿ ಜ್ವರ, ಕೆಮ್ಮು, ಗಂಟಲು ಕೆರೆತ ಹಾಗೂ ಮೈಕೈನೋವಿನಿಂದ ಬಳಲುತ್ತಾರೆ. ಇದರೊಂದಿಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಳ್ಳುತ್ತದೆ. ಕೆಲವು ರೋಗಿಗಳು ವಾಸನೆ ಹಾಗೂ ರುಚಿಯನ್ನು ಕಳೆದುಕೊಳ್ಳುತ್ತಾರೆ.ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಹೆಚ್ಚು ವಯಸ್ಸಾದವರಿಗೆ ಈ ಖಾಯಿಲೆ ಬೇಗ ಅಂಟಿಕೊಳ್ಳುತ್ತದೆ. ಸಾಮಾನ್ಯವಾಗಿ ರಕ್ತದೊತ್ತಡ, ಸಕ್ಕರೆ ಖಾಯಿಲೆ, ಕ್ಯಾನ್ಸರ, ಹೃದಯರೋಗ ಹಾಗೂ ಜಠರ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಬೇಗನೇ ಈ ಖಾಯಿಲೆಗೆ ತುತ್ತಾಗುತ್ತಾರೆ ಎನ್ನುವ ಅಂಶವು ಬೆಳಕಿಗೆ ಬಂದಿದೆ.

- ಕೋವಿಡ್ 19 ತುಂಬಾ ಸುಲಭವಾಗಿ ಹರಡುತ್ತದೆ. ಈ ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯು ಕೆಮ್ಮಿದರೆ, ಸೀನಿದರೆ, ನಕ್ಕರೆ, ಮಾತನಾಡಿದರೆ, ಅವರ ಉಸಿರಿನಿಂದ ರೋಗಾಣುಗಳು ಬೇರೆಯವರಿಗೆ ಹರಡುತ್ತವೆ. ಬಾಯಿ ಹಾಗೂ ಮೂಗಿನಿಂದ ಹೊರಡುವ ಉಸಿರಿನ ಮುಖಾಂತರ ಬೇರೆಯವರಿಗೆ ಹರಡುತ್ತದೆ. ವಿಶೇಷವಾಗಿ ಕೋವಿಡ್ 19 ಮಹಾಮಾರಿಯಿಂದ ಬಳಲುತ್ತಿರುವ ವ್ಯಕ್ತಿಯಿಂದ 2 ಮೀಟರಿಕ್ಕಿಂತಲೂ ಕಡಿಮೆ ಸಂಪರ್ಕದಲ್ಲಿ ಬರುವ ವ್ಯಕ್ತಿಗಳಿಗೆ ರೋಗ ಹರಡುವ ಸಾಧ್ಯತೆ ಇದೆ. ರೋಗಿಯು ಬಳಸಿದ ಬಟ್ಟೆಗಳಿಂದಲೂ ಹರಡುವ ಸಾಧ್ಯತೆ ಇರುವುದರಿಂದ ಕಳಚಿದ ಬಟ್ಟೆಯನ್ನು ಬುಟ್ಟಿಗೆ ಹಾಕಿ ಮುಚ್ಚಳದಿಂದ ಮುಚ್ಚಿಬಿಡಬೇಕು.

- ಜನರು ಸಾಮಾಜಿಕ ಅಂತರ ಕಾಯ್ದುಕೊಳ್ಳದೇ ಗುಂಪು ಗುಂಪಾಗಿ ಸೇರಿದರೆ ಕೋವಿಡ್ 19 ಹರಡಲು ಅನುವು ಮಾಡಿಕೊಟ್ಟಂತಾಗುತ್ತದೆ.
- ಕೋವಿಡ್ 19 ರೋಗಲಕ್ಷಣಗಳನ್ನು ಹೊಂದದವರಿಂದಲೂ ಖಾಯಿಲೆ ಹರಡುವುದು. ಇದರ ಲಕ್ಷಣವೆಂದರೆ ಜ್ವರ , ಕೆಮ್ಮು, ಉಸಿರಾಟದ ತೊಂದರೆ, ಗಂಟಲು ಕೆರೆತ ಹಾಗೂ ತಲೆನೋವು ಇವಿಷ್ಟು ಪ್ರಮುಖ ಲಕ್ಷಣಗಳಾಗಿವೆ.

# ಸಾಮಾನ್ಯ ತತ್ವಗಳು

ಕೆಲಸ ಮಾಡುತ್ತಿರುವ ಸ್ಥಳದಲ್ಲಿ ಇರುವ ಎಲ್ಲರೂ ಒಬ್ಬರಿಗೊಬ್ಬರು ಸಂಪರ್ಕಕ್ಕೆ ಬಂದರೆ ಕೋವಿಡ್ 19 ಮಹಾಮಾರಿಗೆ ತುತ್ತಾಗುವ ಸಾಧ್ಯತೆಗಳಿವೆ.

ಅದಕ್ಕಾಗಿ ಪ್ರಮುಖವಾಗಿ ಮಾಡಬೇಕಾದ ಕೆಲಸವೆಂದರೆ, ರೋಗವು ಸಾಂಕ್ರಾಮಿಕವಾಗಿ ಹರಡದಂತೆ ನೋಡಿಕೊಳ್ಳಬೇಕು. ಇದರಲ್ಲಿ ಮುಖ್ಯವಾಗಿ

1.ಸಾರ್ವಜನಿಕರು , ಗ್ರಾಹಕರು ಹಾಗೂ ಕಾರ್ಮಿಕರು
2. ರೋಗಕ್ಕೆ ತುತ್ತಾದ ವ್ಯಕ್ತಿ ಅಥವಾ ಕೋವಿಡ್ 19 ಸೋಂಕಿತರು ಸ್ಥಳದಲ್ಲಿ ಸುತ್ತಾಡಿದವರು.
3. ನೌಕರರು ಮುನ್ನೆಚ್ಚರಿಕೆ ವಹಿಸುವಂತೆ ನೋಡಿಕೊಳ್ಳುವುದು.
4. ಮನೆ ಹಾಗೂ ಸಮೂಹದಲ್ಲಿ ರೋಗ ಹರಡದಂತೆ ನೋಡಿಕೊಳ್ಳುವುದು.
5. ಪ್ರತಿಯೊಬ್ಬರೂ ಖಾಯಿಲೆಯ ಬಗ್ಗೆ ಗಂಭೀರವಾಗಿರಬೇಕು.
6. ಮಾನಸಿಕವಾಗಿ ಸದೃಢರಾಗಿರಬೇಕು.

# ಸಂಕ್ರಮಣವನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳು

ಮಾಸ್ಕ ಧರಿಸಬೇಕು, ಆಗಾಗ ಕೈಗಳನ್ನು ತೊಳೆದುಕೊಳ್ಳುತ್ತಿರಬೇಕು, ಸಂಕ್ರಮಣಕ್ಕೆ ತುತ್ತಾಗದಂತೆ ನೋಡಿಕೊಳ್ಳಬೇಕು, ಸಮಾಜಿಕ ಅಂತರ ಕಾಯ್ದುಕೊಳ್ಳಬೇಕು ಹಾಗೂ ಕಾರ್ಯ ಮಾಡುವ ಸ್ಥಳವನ್ನು ಆಗಾಗ ಸ್ವಚ್ಚಗೊಳಿಸುತ್ತಿರಬೇಕು, ಕೋವಿಡ್ 19 ಮಹಾಮಾರಿಯಿಂದ ರಕ್ಷಿಸಿಕೊಳ್ಳಲು ಪ್ರಮುಖವಾಗಿ ನೌಕರರಿಗೆ ಅರಿವು ಮೂಡಿಸುವ ಕೆಲಸವಾಗಬೇಕು. ಪ್ರಶ್ನೋತ್ತರ, ಚರ್ಚೆ , ಪರಿಚರ್ಚೆ , ಸೂಚನಾ ಫಲಕ, ದೃಶ್ಯ ಮಾದ್ಯಮ ಹಾಗೂ ಶ್ರವ್ಯೆ ಮಾದ್ಯಮದ ಮುಖಾಂತರ ಈ ಕೆಲಸವನ್ನು ಮಾಡಬೇಕು.

1. ಮಾಸ್ಕ ಹಾಕಿ ಕೊಳ್ಳುವುದು , ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳುವುದು, ಕೆಮ್ಮು ಬಂದಾಗ ಹಾಗೂ ಸೀನಿವಾಗ ಎಚ್ಚರವಹಿಸುವುದು, ಮಾತನ್ನಾಡುವಾಗ ಉಸಿರು ಬೇರೆಯವರಿಗೆ ತಲುಪದಂತೆ ನೋಡಿಕೊಳ್ಳಬೇಕು. ಅಂತಹ ಸಂದರ್ಭದಲ್ಲಿ ಕಡ್ಡಾಯವಾಗಿ ಬಾಯಿ ಹಾಗೂ ಮೂಗನ್ನು ಕರವಸ್ತ್ರದಿಂದ ಹಿಡಿದುಕೊಳ್ಳಬೇಕು.

2. ಕೆಮ್ಮು, ಸೀನುಗಳನ್ನು ತಡೆಯುವುದಕ್ಕೆ ಉಪಯೋಗಿಸಿದ ವಸ್ತ್ರಗಳನ್ನು ಕಸದ ಬುಟ್ಟಿಗೆ ಹಾಕಿ ಮುಚ್ಚಳದಿಂದ ಮುಚ್ಚಿಬಿಡಬೇಕು.

3. ಆಗಾಗ ಕೈಗಳನ್ನು ಸೋಪು ಹಾಕಿ ಕನಿಷ್ಟ ಪಕ್ಷ 40 ಸೆಕೆಂಡುಗಳವರೆಗೆ ತೊಳೆದುಕೊಳ್ಳಬೇಕು. ಶೇ 60 % ಅಲ್ಕೋಹಾಲ ಅಂಶವಿರುವ ಸ್ಯಾನಿಟೈಸರ್‌ನಿಂದ

ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು ಇದು ರೋಗ ಹರಡದಂತೆ ತಡೆಯಲು ಸಹಕಾರಿಯಾಗುತ್ತದೆ.

4. ಕೋವಿಡ್ 19 ಮಹಾಮಾರಿಯನ್ನು ತಡೆಯಲು ಕನಿಷ್ಟ ಪಕ್ಷ 2 ಮೀಟರ್ ಅಂತರ ಕಾಯ್ದುಕೊಳ್ಳಬೇಕು. ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸ್ಸಿನಂತೆ ಒಬ್ಬ ಕಾರ್ಮಿಕ ಹಾಗೂ ಇನ್ನೊಬ್ಬ ಕಾರ್ಮಿಕನ ಮಧ್ಯೆ ಕನಿಷ್ಟಪಕ್ಷ 10 ಸ್ಕ್ವೇರ ಮೀಟರ ಅಂತರ ಕಾಯ್ದುಕೊಳ್ಳಬೇಕು

5. ಕೋವಿಡ್ 19 ಮಹಾಮಾರಿಯಿಂದ ಬಳಲುತ್ತಿರುವ ರೋಗಿಯು ಉಪಯೋಗಿಸಿದ ಸಾಮಾನು ಸರಂಜಾಮುಗಳನ್ನು ಸ್ವಚ್ಛಗೊಳಿಸಬೇಕು. ಇಲ್ಲದೇ ಹೋದರೆ, ರೋಗವು ಸಂಕ್ರಮಣದ ಮುಖಾಂತರ ಬೇರೆಯುವರಿಗೆ ಹರಡುವ ಸಾಧ್ಯತೆ ಇದೆ.

6. ಕೇವಲ ಮಹಾಮಾರಿ ಖಾಯಿಲೆ ಬಗ್ಗೆ ತಿಳಿದುಕೊಂಡಿದ್ದರೆ ಸಾಲದು ಅದನ್ನು ಬೇರೆಯುವರಿಗೆ ಹರಡದಂತೆ ಮಾಡಲು ಕಡ್ಡಾಯವಾಗಿ ಮಾಸ್ಕ ಧರಿಸಬೇಕು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು, ಆಗಾಗ ಸಾಬೂನಿನಿಂದ ಕೈ ತೊಳೆದುಕೊಳ್ಳುತ್ತಾ ಇರಬೇಕು. ಜೊತೆಗೆ ಆಗಾಗ ಸ್ಯಾನಿಟೈಸರ್ ನಿಂದ ಕೈಗಳನ್ನು ಸೋಂಕುರಹಿತ ಮಾಡಿಕೊಳ್ಳಬೇಕು. ಹೀಗೆ ಸಾಮೂಹಿಕ ಪ್ರಯತ್ನದಿಂದ ಮಾತ್ರ ನಾವು ಕೋವಿಡ್ 19 ಮಹಾಮಾರಿಯಿಂದ ಪಾರಾಗಬಹುದು.

## ಕಾರ್ಯಸ್ಥಳದ ನಿರ್ವಹಣೆ

ಕಾರ್ಯಸ್ಥಳವನ್ನು ವೈಜ್ಞಾನಿಕವಾಗಿ ಆರೋಗ್ಯಕ್ಕೆ ಪೂರಕವಾಗುವಂತೆ ವಾತಾವರಣವನ್ನು ನಿರ್ಮಿಸಬೇಕು. ಅದಕ್ಕಾಗಿ ಕೆಲವು ಆಡಳಿತಾತ್ಮಕ ನಿರ್ಣಯಗಳನ್ನು ಪಾಲಿಸಬೇಕಾಗುತ್ತದೆ. ಸಾಧ್ಯವಾದಷ್ಟು ಕಾರ್ಯಸ್ಥಳಕ್ಕೆ ಸಾರ್ವಜನಿಕರು ಬಾರದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಸಾರ್ವಜನಿಕರು ಬಂದು ಬೇಟಿಯಾಗಬೇಕು ಎಂಬುದಾದರೆ ಪೂರ್ವ ಅನುಮತಿ ಪಡೆದುಕೊಳ್ಳುವುದನ್ನು ಕಡ್ಡಾಯ ಮಾಡಬೇಕು. ಕಾರ್ಯಸ್ಥಳಗಳಲ್ಲಿ ಕಿಟಕಿ ಹಾಗೂ ಬಾಗಿಲುಗಳನ್ನು ತೆರೆದಿಡಬೇಕು, ಕೇಂದ್ರೀಯ ಹವಾ ನಿಯಂತ್ರಣ ವ್ಯವಸ್ಥೆಯನ್ನು ಸ್ತಬ್ಧ ಮಾಡಬೇಕು.

1. ಸಾಧ್ಯವಾದಷ್ಟು ಮಟ್ಟಿಗೆ ಅವರ ಆರೋಗ್ಯದ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು ಉತ್ತಮ ಯಾವುದೇ ಸಂದರ್ಭದಲ್ಲಿ ಸಾರ್ವಜನಿಕರು ರಿಸಪ್ಸೆನ್ ಗ್ಯಾಲರಿಗಿಂತ ಹೆಚ್ಚಿನ ಪ್ರದೇಶಕ್ಕೆ ಬಾರದಂತೆ ನೋಡಿಕೊಳ್ಳಬೇಕು . ಪ್ರತಿಯೊಬ್ಬರು ಆರೋಗ್ಯ ಸೇತು ಆ್ಯಪ್‌ನ್ನು ಬಳಸಬೇಕು.

2. ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕೈ ಬಿಡಬೇಕು.

3. ಕಾರ್ಯಸ್ಥಳಕ್ಕೆಬರುವ ಕಾರ್ಮಿಕರು ನೌಕರರು, ಆಗಂತುಕರು ಒಳಗೆ ಪ್ರವೇಶಿಸುವುದಕ್ಕಿಂತಲೂ ಮೊದಲು ಪರೀಕ್ಷೆಗೆ ಒಳಪಡಬೇಕು ಕೋವಿಡ್ 19 ಮಹಾಮಾರಿಯ ಲಕ್ಷಣಗಳನ್ನು ಹೊಂದಿರುವವರು ಕಂಡುಬಂದರೆ ಪ್ರವೇಶ ಮಾಡಲು ನಿರಾಕರಿಸುವುದು. ಹಾಗೆಯೇ ಅವರು ವೈದ್ಯಕೀಯ ಪರೀಕ್ಷೆಗೆ ಒಳಪಡಲು ಸೂಚಿಸಬೇಕು ಕಾರ್ಯಸ್ಥಳಕ್ಕೆ ಬರುವ ಹಾಗೂ ಹೋಗುವವರ ವಿವರ ಪಡೆದುಕೊಳ್ಳಬೇಕು ಎಲ್ಲಿಯೂ ಜನಸಂದಣಿ ಹೆಚ್ಚಾಗದಂತೆ ನೋಡಿಕೊಳ್ಳಬೇಕು
4. ಕೋವಿಡ್ 19 ಮಹಾಮಾರಿಯ ಲಕ್ಷಣಗಳು ಕಂಡುಬಂದರೆ ತಡಮಾಡದೇ ಮೇಲಧಿಕಾರಿಗಳಿಗೆ ತಿಳಿಸಿ ಇಂತಹ ವ್ಯಕ್ತಿಗಳನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಡಬೇಕು, ಅಲ್ಪ ಸ್ವಲ್ಪ ಲಕ್ಷಣ ಕಂಡುಬಂದರೂ ಮನೆಗೆ ಮರಳಿ ಕಳುಹಿಸಿಕೊಡಬೇಕು.
5. ಕಾರ್ಯಸ್ಥಳಕ್ಕೆ ಬರುವ ನೌಕರರು , ಕಾರ್ಮಿಕರು ಹಾಗೂ ಆಗಂತಕರು ಒಳಗೆ ಪ್ರವೇಶಿಸುವುದಕ್ಕಿಂತ ಮೊದಲು ಸ್ಯಾನಿಟೈಸರ್ ದಿಂದ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು.

## ಕ್ರಮಾನುಸಾರ ಶಿಷ್ಟಾಚಾರ , ಮಾಸ್ಕ ಕಡ್ಡಾಯಗೊಳಿಸುವುದು ಹಾಗೂ ಸಂಕ್ರಮಣ ತಡೆಯುವುದು.

1. ಕೆಲಸಕ್ಕೆ ಬರುವ ಕಾರ್ಮಿಕರು ಹಾಗೂ ಆಗಂತುಕರು ಕಾರ್ಯಸ್ಥಳಕ್ಕೆ ಪ್ರವೇಶ ಮಾಡುವುದಕ್ಕಿಂತಲೂ ಮೊದಲು ಮಾಸ್ಕ ಧರಿಸುವುದು ಕಡ್ಡಾಯ ಕೆಲಸ ಪೂರೈಸಿ ಮನೆಗೆ ಹೊರಡುವಾಗಲೂ ಮಾಸ್ಕ ಧರಿಸುವುದು ಕಡ್ಡಾಯ ಮಾಸ್ಕ ಮೂರು ಪದರುಗಳನ್ನು ಹೊಂದಿರಬೇಕು ಅದನ್ನು ಸೋಪಿನಿಂದ ತೊಳೆದು ಪುನಃ ಉಪಯೋಗಿಸುವುದಕ್ಕೆ ಬರುವಂತಿರಬೇಕು ಮಾಸ್ಕ ಧರಿಸುವ ವಿಧಾನವನ್ನು ಪ್ರಾತ್ಯಕ್ಷಿಕೆಯ ಮೂಲಕ ಹೇಳಿ ಕೊಡಬೇಕು ಮಾಸ್ಕ ಬಾಯಿ ಮತ್ತು ಮೂಗು ಎರಡನ್ನು ಮುಚ್ಚಿರುವಂತೆ ನೋಡಿಕೊಳ್ಳಬೇಕು ಇದಕ್ಕಾಗಿ ಕಾರ್ಯಸ್ಥಳದಲ್ಲಿ ಪೋಸ್ಟರ್‌ಗಳನ್ನು ಅಂಟಿಸಿ ಜಾಗೃತಿ ನೀಡಬೇಕು.
2. ಕಾರ್ಮಿಕರು ಹಾಗೂ ನೌಕರರು ಉಪಯೋಗಿಸಿದ ಟಿಶ್ಯು ಹಾಗೂ ವಸ್ತ್ರಗಳನ್ನು ಕಸದ ಬುಟ್ಟಿಗೆ ಹಾಕಿ ಮುಚ್ಚಬೇಕು ಅಂತಹ ಪದಾರ್ಥಗಳನ್ನು ಎಲ್ಲೆಂದರಲ್ಲಿ ಹಾಕುವುದನ್ನು ನಿಷೇಧಿಸಬೇಕು.

# ಕಾರ್ಯಸ್ಥಳದ ಸ್ವಚ್ಚತೆ , ಆಗಾಗ ಸ್ಯಾನಿಟರೈಸ್ ಮಾಡುವುದು , ಸಾಬೂನಿನಿಂದ ಕೈತೊಳೆದುಕೊಳ್ಳುವುದು ಹಾಗೂ ಕಾರ್ಮಿಕರು ವಸ್ತುಗಳನ್ನು ಹಂಚಿಕೊಳ್ಳಬಾರದು ಮತ್ತು ಸ್ಪರ್ಶ ಮಾಡಬಾರದು.

1. ನಿಯಮಿತವಾಗಿ ಕಾರ್ಯಸ್ಥಳಗಳನ್ನು ಸ್ವಚ್ಚಗೊಳಿಸುತ್ತಿರಬೇಕು ಕ್ರಿಮಿನಾಶಕದಿಂದ ನೆಲಾವರಣವನ್ನು ಸ್ವಚ್ಚಗೊಳಿಸಬೇಕು ಕಾರ್ಯಸ್ಥಳದಲ್ಲಿರುವ ಬಾಗಿಲು, ವಿದ್ಯುತ್ ಗುಂಡಿಗಳು, ಅಡುಗೆ ಮನೆ , ವಾಶ್ರೂಮ ಆವರಣ , ನಲ್ಲಿಗಳು , ಸಿಂಕ್ ಗಳು , ಮೂತ್ರ ವಿಸರ್ಜನೆಯ ಸ್ಥಳ , ಯಂತ್ರಗಳು , ಕಿಡಕಿಗಳು , ಹಿಡಿಕೆಗಳು, ಸಲಾಖೆಗಳು , ಪೀಠೋಪಕರಣಗಳು ಮೇಜುಗಳು , ರ್ಯಾಕ್ , ಡೆಸ್ಕ್ ವಾಹನಗಳು, ಟೆಲಿಫೋನ್ ಸಾಮಗ್ರಿಗಳು, ಕಂಪ್ಯೂಟರ್‌ಗಳು ಹಾಗೂ ಕೀ ಬೋರ್ಡ ಮುಂತಾದವುಗಳನ್ನು ಜಾಗರೂಕತೆಯಿಂದ ಸ್ವಚ್ಚಗೊಳಿಸಬೇಕು. ಈ ಕೆಲಸ ದಿನಕ್ಕೆ ಕಡ್ಡಾಯವಾಗಿ 2 ಸಾರಿ ಆಗಬೇಕು. ಕೆಲಸ ಆರಂಭಕ್ಕೆ ಮೊದಲು ಹಾಗೂ ಕೆಲಸ ಮುಗಿಸಿದ ಬಳಿಕ ಹೀಗೆ 2 ಸಾರಿ ಮಾಡಬೇಕು ಒಂದು ಕಾರ್ಯಾವಧಿ ಮುಗಿದು ಇನ್ನೊಂದು ಕಾರ್ಯಾವಧಿ ಆರಂಭವಾಗುವುದರ ಮದ್ಯ ಕಡಿಮೆ ಎಂದರೂ ಒಂದು ಘಂಟೆಯ ಸಮಯ ಅಂತರವಿರಬೇಕು. ಈ ಅವಧಿಯಲ್ಲಿ ಶೇಕಡಾ 1 ರ ಅಂಶವಿರುವ ಸೋಡಿಯಂ ಃಐಪೋಕ್ಲೋರೈಡ್ ಸೊಲ್ಯೂಶನ್ ಉಪಯೋಗಿಸಿ ಸ್ವಚ್ಚಗೊಳಿಸಬೇಕು. ಸ್ವಚ್ಚತಾ ಕಾರ್ಯದಲ್ಲಿ ತೊಡಗುವ ಕಾರ್ಮಿಕರಿಗೆ ಸರಿಯಾದ ಸಮವಸ್ತ್ರ , ಸಲಕರಣೆಗಳು ಹಾಗೂ ಪ್ಲೋರೈಡ್ ದ್ರಾವಣಗಳನ್ನು ಪೂರೈಸಬೇಕು. ಕಾರಣ ಅವರ ಆರೋಗ್ಯವೂ ಅಷ್ಟೇ ಪ್ರಮುಖವಾದುದು ಅವರು ಉಪಯೋಗಿಸುವ ಸಲಕರಣೆಯು ಸರಕಾರದಿಂದ ಮಾನ್ಯತೆ ಪಡೆದಿರಬೇಕು ಕಡಿಮೆ ಗುಣಮಟ್ಟದ ದ್ರಾವಣ ಹಾಗೂ ಸಲಕರಣೆಗಳು ಅಪಾಯಕಾರಿ ಎಂಬ ಮಾತು ನೆನಪಿರಲಿ

2. ಕಸದಬುಟ್ಟಿ ಹಾಗೂ ಅದನ್ನು ಇರಿಸಿದ ಸ್ಥಳವನ್ನು ಸ್ವಚ್ಚ ಮಾಡಬೇಕು ದಿನದ ಕೆಲಸ ಮುಗಿದ ಮೇಲೆ ಶೇಕಡಾ 1 ಅಂಶವನ್ನು ಹೊಂದಿದ ಸೋಡಿಯಂ ಹೈಪೋಕ್ಲೋರೈಡ್ ಲೋಷನ್ ದಿಂದ ಸ್ವಚ್ಚಗೊಳಿಸಬೇಕು ಸ್ವಚ್ಚತೆಗಾಗಿ ಉಪಯೋಗಿಸಿದ ಕೈಕವಚ , ಮಾಸ್ಕ, ಗೌನ ಹಾಗೂ ಬೂಟುಗಳನ್ನು ಸ್ವಚ್ಚ ಮಾಡಬೇಕು

3 ನೌಕರರು , ಕಾರ್ಮಿಕರು ಹಾಗೂ ಕಾರ್ಯಸ್ಥಳಕ್ಕೆ ಬಂದು ಹೋಗುವ ಸಾರ್ವಜನಿಕರು ಸ್ಯಾನಿಟರೈಜ ಹಾಗೂ ಸೋಪಿನಿಂದ ಕೈ ತೊಳೆದುಕೊಳ್ಳಬೇಕು ಸಾಮಾನ್ಯವಾಗಿ ಜನರು ಸ್ಪರ್ಶ ಮಾಡ ಬಹುದಾದ ಜಾಗೆಗಳನ್ನು ತೊಳೆದು ಸ್ವಚ್ಚಗೊಳಿಸಬೇಕು. ಇದರಿಂದ ರೋಗಲಕ್ಷಣ ಹೊಂದಿದ ವ್ಯಕ್ತಿ ಆ ವಸ್ತುವನ್ನು ಸ್ಪರ್ಶ ಮಾಡಿದ್ದರೆ ರೋಗಾಣುಗಳು ಆ ವಸ್ತುವಿಗೆ ಅಂಟಿಕೊಂಡಿರುವ ಸಾಧ್ಯತೆ ಇರುತ್ತದೆ. ಆದುದರಿಂದ ಸ್ವಚ್ಚಗೊಳಿಸುವುದರಿಂದ

ಅಪಾಯದಿಂದ ಪಾರಾಗಬಹುದು. ಊಟಕ್ಕೆ ಮೊದಲು ಹಾಗೂ ಊಟದ ನಂತರ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು.

3. ಸಾಮಾನ್ಯವಾಗಿ ಜನರು ಓಡಾಡುವ, ಪ್ರವೇಶ ಮಾಡುವ ಬಾಗಿಲು, ಮೇಲು ಮಹಡಿಗೆ ಹತ್ತುವ ಪಕ್ಕದ ಜೋಡನೆಗಳು, ಗೋಗೆಗಳು ಹಾಗೂ ಬಾಗಿಲು ಹಿಡಿಕೆಗಳನ್ನು ಜನರು ಸ್ಪರ್ಶ ಮಾಡುವುದನ್ನು ತಡೆಯಬೇಕು ಇದನ್ನು ಸೂಚನಾ ಫಲಕದಲ್ಲಿ ಸೂಚಿಸಬೇಕು. ಸಾಧ್ಯವಾದರೆ ಬಾಗಿಲ ಚಿಲಕಗಳನ್ನು ತೆಗೆಸಿಬಿಡಬೇಕು. ಸಾಧ್ಯವಾದರೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಬೇಕು ಇದಕ್ಕಾಗಿ ಒಬ್ಬ ನುರಿತ ವ್ಯಕ್ತಿಯನ್ನು ಮೇಲುಸ್ತುವಾರಿ ನೋಡಿಕೊಳ್ಳಲು ನೇಮಿಸಬೇಕು. ಆ ವ್ಯಕ್ತಿ ಕಡ್ಡಾಯವಾಗಿ ಕೈಕವಚ ಹಾಕಿಕೊಂಡಿರಬೇಕು.
4. ಈ ಮಹಾಮಾರಿಯು ಹತೋಟಿಗೆ ಬರುವವರೆಗೆ ಸಾರ್ವಜನಿಕವಾಗಿ ಪತ್ರಿಕೆಗಳನ್ನು ಹರಡಬಾರದು
5. ನೌಕರರು ಸಾಮಾನ್ಯವಾಗಿ ಕಾರ್ಯಸ್ಥಳದಲ್ಲಿ ಉಪಯೋಗಿಸುತ್ತಿರುವ ಪೆನ್ನು , ಫೋನು, ಡೆಸ್ಕು , ಕಂಪ್ಯೂಟರ್ ಉಪಕರಣಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವ ಅಥವಾ ಬದಲಿಸುವ ಪದ್ಧತಿಯನ್ನು ಬಿಟ್ಟು ಬಿಡಬೇಕು.
6. ಹೊರಗಿನಿಂದ ಬರುವ ಲಗೇಜು, ಪಾರ್ಸಲ್, ಕಾಗದ ಪತ್ರಗಳನ್ನು ಸ್ವೀಕರಿಸಲು ಸ್ಥಳವನ್ನು ಗುರುತಿಸಬೇಕು. ಸ್ವೀಕರಿಸಿದ ನಂತರ ಬಂದ ವಸ್ತುಗಳನ್ನು ಸ್ಯಾನಿಟೈಸ್ ಮಾಡಬೇಕು.
7. ಪಾನೀಯಗಳನ್ನು ಕುಡಿಯುವುದಕ್ಕೆ ಬಳಸಿ ಬಿಸಾಡುವ ಸಾಮಗ್ರಿಗಳನ್ನು ಉಪಯೋಗಿಸಬೇಕು. ಉಪಯೋಗಿಸಿದ ನಂತರ ಕಸದ ಬುಟ್ಟಿಗೆ ಹಾಕಬೇಕು.
8. ನೌಕರರು ಹಾಗೂ ಕಾರ್ಮಿಕರಿಗೆ ಆಗಾಗ ತಮ್ಮ ಮೂಗು ಬಾಯಿ ಹಾಗೂ ಕಣ್ಣುಗಳನ್ನು ಮುಟ್ಟದಿರುವಂತೆ ತಿಳುವಳಿಕೆ ಹೇಳಬೇಕು
9. ಸುರಂಗ, ಚೇಂಬರ್ , ಹಾಗೂ ಕ್ಯಾಬಿನ್‌ಗಳಲ್ಲಿ ಯಾವುದೇ ಸಿಂಪಡಣೆಗಳನ್ನು ಮಾಡಬಾರದು. ಹೀಗೆ ಮಾಡುವುದರಿಂದ ಅಲ್ಲಿ ಹೋಗಿ ಬರುವವರಿಂದ ರೋಗ ಹರಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ

## ಕಾರ್ಯಕ್ಷೇತ್ರಗಳಲ್ಲಿ ಸಾಮಾಜಿಕ ಅಂತರ: ದೈಹಿಕವಾಗಿ ಒಬ್ಬರಿಗೊಬ್ಬರು ಅಂತರ ಕಾಯ್ದುಕೊಳ್ಳದೆ ಕೆಲಸ ನಿರ್ವಹಿಸಕೂಡದು.

1. ಕಾರ್ಯ ಮಾಡುವ ಸ್ಥಳ , ಕಛೇರಿ, ಕಾರ್ಖಾನೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮೇಜು, ಡೆಸ್ಕು, ಹಾಗೂ ಕುರ್ಚಿಗಳ ಮಧ್ಯೆ ಕನಿಷ್ಟ 2 ಮೀಟರ್ ಅಂತರವಿರಲಿ. ಇದಕ್ಕಾಗಿ

ಮದ್ಯದಲ್ಲಿ ಬ್ಯಾರಿಕೇಡ್, ಗೆರೆ, ಹಾಗೂ ಗುರುತುಗಳ ಮುಖಾಂತರ ಅಂತರ ಸೂಚಿಸಬೇಕು ಹೀಗೆ ಮಾಡುವುದರಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ.

2. ಕಾರ್ಯ ನಿರ್ವಹಿಸುವ ಸ್ಥಳದ ಸುತ್ತಮುತ್ತಲೂ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ವಿಶೇಷವಾಗಿ ಪ್ರವೇಶ ದ್ವಾರ, ದಾರಿ, ಲಿಫ್ಟ್ , ಮೆಟ್ಟಿಲು ಹಾಗೂ ಲಾಭಿಗಳಲ್ಲಿ ಒಟ್ಟೊಟ್ಟಿಗೆ ಹಾಗೂ ಗುಂಪು ಗುಂಪಾಗಿ ಹೋಗದಂತೆ ನೋಡಿಕೊಳ್ಳಬೇಕು.

3. ಪ್ರತಿಯೊಬ್ಬರು ನಿಗಧಿಪಡಿಸಿದ ಸ್ಥಳದಲ್ಲಿ ಇರಬೇಕು ಅಂತರ ಕಾಪಾಡಿಕೊಳ್ಳಬೇಕು. ಸೂಚನೆಗಳನ್ನು ಗೋಡೆಯ ಮೇಲೆ ಚಿತ್ರಗಳನ್ನು ಬಿಡಿಸಿ ತಿಳಿವಳಿಕೆ ನೀಡಬೇಕು.

4. ಸಾರ್ವಜನಿಕವಾಗಿ ಬಳಕೆಯಾಗುವ ಉಪಹಾರ ಗೃಹ, ಬಟ್ಟೆ ಬದಲಿಸುವ ಕೋಣೆ ಹಾಗೂ ಶೌಚಾಲಯಗಳಲ್ಲಿ ಹೆಚ್ಚು ಜನ ಸೇರದಂತೆ ನೋಡಿಕೊಳ್ಳಬೇಕು .

5. ಮನರಂಜನಾ ಚಟುವಟಿಕೆಗಳನ್ನು ನಿಷೇಧಿಸಬೇಕು.

6. ಒಬ್ಬರಿಗೊಬ್ಬರು ಮುಟ್ಟುವ ಹಾಗೂ , ಕೈಕುಲುಕುವ ಹಾಗೂ ಅಪ್ಪಿಕೊಳ್ಳುವುದನ್ನು ನಿಷೇಧಿಸಬೇಕು.

7. ನೌಕರರು ಹಾಗೂ ಕಾರ್ಮಿಕರು ಅನಾವಶ್ಯಕವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಓಡಾಡುವುದನ್ನು ನಿಷೇಧಿಸಬೇಕು.

8. ದೂರವಾಣಿ ಹಾಗೂ ಧ್ವನಿ ಮುದ್ರಣಗಳ ಮೂಲಕ ಸಂದೇಶಗಳು ರವಾನೆಯಾಗಲಿ. ಹಣ ಪಾವತಿಗೆ ಎಲೆಕ್ಟ್ರಾನಿಕ್ ಉಪಕರಣಗಳು ಬಳಕೆಯಾಗಲಿ. ಕ್ರೆಡಿಟ್ ಕಾರ್ಡ ಮುಖಾಂತರ ಹಣಕಾಸು ವ್ಯವಹಾರ ಮಾಡಲು ಪ್ರೋತ್ಸಾಹಿಸಿ ಯಂತ್ರವು ಖಜಂಚಿಯಿಂದ ಸ್ವಲ್ಪ ದೂರದಲ್ಲಿ ಇರಲಿ.

9. ಮುಖಾ ಮುಖಿಯಾಗಿ ಕುಳಿತುಕೊಳ್ಳುವ ಸಭೆಗಳನ್ನು ನಿಷೇಧಿಸಿ. ಅನಾವಶ್ಯಕ ಸಭೆ ಸಮಾರಂಭಗಳನ್ನು ಆಯೋಜಿಸುವುದು ಬೇಡ. ಗುಂಪಾಗಿ ಸೇರಿಕೊಳ್ಳುವ ಸಂದರ್ಭವನ್ನುತಂದುಕೊಳ್ಳಬೇಡಿ. ಸಭೆಯ ಅವಶ್ಯಕತೆಯಿದ್ದಲ್ಲಿ ಸಾಧ್ಯವಿದ್ದಷ್ಟು ಕಡಿಮೆ ಜನ ಸೇರುವುದು. ಸಾಧ್ಯವಾದರೆ ಸಭೆಗಳನ್ನು ತೆರೆದ ಮೈದಾನದಲ್ಲಿ ಆಯೋಜಿಸಬೇಕು. ಸಭೆಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕಗಳನ್ನು ಕಡ್ಡಾಯವಾಗಿ ಧರಿಸಬೇಕು ಆಗಾಗ ಸ್ಯಾನಿಟರೈಜ ಮಾಡಬೇಕು ಹಾಗೂ ಸೋಪಿಸಿಂದ ಕೈಗಳನ್ನು ತೊಳೆದುಕೊಳ್ಳಬೇಕು

10. ಕೆಲಸದ ಅವಧಿಗಳಲ್ಲಿ ಬದಲಾವಣೆ, ಆವಧಿಕ ಕಾರ್ಯಾವದಿ, ಒಂದು ದಿನ ಬಿಟ್ಟು ಇನ್ನೊಂದು ದಿನಕ್ಕೆ ಮಾಡುವ ವ್ಯೆವಸ್ಥೆಗಳ ಮುಖಾಂತರ ಕಾರ್ಯಸ್ಥಳ ಹಾಗೂ ಕಾರ್ಖಾನೆಗಳಲ್ಲಿ ಜನಸಂದಣಿಯಾಗದಂತೆ ನೋಡಿಕೊಳ್ಳಬೇಕು.

11. ಕೆಲಸಗಳನ್ನು ಮಾಡುವ ಕೆಲಸಗಾರರು ಕಾರ್ಮಿಕರು ಹಾಗೂ ನೌಕರರು ಒಂದೇ ಕಡೆಗೆ ಸೇರುವುದನ್ನು ಕಡಿಮೆ ಮಾಡಬೇಕು ಕೆಲಸಗಾರರಲ್ಲಿ ಚಿಕ್ಕ ಚಿಕ್ಕ ತಂಡಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಜನಸಂದಣಿ ಕಡಿಮೆ ಮಾಡಬಹುದು.

12. ಸಂಪರ್ಕಕ್ಕೆ ಉಪಯೋಗಿಸುವ ಸಾಧನಗಳು , ಬಿಲ್ಲುಗಳು, ಸರಕುಪಟ್ಟಿ , ಜಾಬ್ ಕಾರ್ಡ್ಸ್ , ಫಾರ್ಮುಗಳು ತರಬೇತಿ ಟಿಪ್ಪಣಿಗಳನ್ನು ಆನಲೈನ್ ಮುಖಾಂತರ ಮಾಡಬೇಕು ಒಟ್ಟಾರೆ ಇದು ಕಾಗದ ರಹಿತವಾಗಿರಲಿ

13. ಮೇಲ್ಮಹಡಿಗೆ ಹೋಗುವ ಲಿಫ್ಟಿನ ಜೊತೆಗೆ ನಡೆದುಕೊಂಡು ಹೋಗಲು ಸ್ಟೆಪ್ಸ್‌ಗಳೂ ಇರಲಿ ಹೀಗೆ ಮಾಡುವುದರಿಂದ ಲಿಫ್ಟ್‌ನಲ್ಲಿ ಆಗುವ ಜನಸಂದಣಿಯನ್ನು ಕಡಿಮೆ ಮಾಡ ಬಹುದಾಗಿದೆ.ಲಿಫ್ಟನಲ್ಲಿ ಒಬ್ಬರು ಇನ್ನೊಬ್ಬರ ಮದ್ಯ ಕನಿಷ್ಟ ಮೂರು ಅಡಿ ಅಂತರವಿರಲಿ ಲಿಫ್ಟನ್ನು ಒಂದು ದಿನಕ್ಕೆ ಎರಡು ಸಾರಿ ಸ್ಯಾನಿಟರೈಜ ಮಾಡಿ ಸ್ವಚ್ಛಗೊಳಿಸಬೇಕು.

14. ಸ್ವಾಗತಕಾರರು , ಟಪಾಲುಗಳ ಆವಾಗಮನ ನೋಡಿಕೊಳ್ಳುವ ಸಿಬ್ಬಂಧಿ, ಸಾಮಾನು ಕಳುಹಿಸುವ ಹಾಗೂ ಹೊರಗಡೆಯಿಂದ ಬಂದ ಸಾಮಾನುಗಳನ್ನು ಇಳಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಸಾಕಷ್ಟು ಮುಂಜಾಗ್ರೃತಾ ವಹಿಸಿಕೊಳ್ಳಬೇಕು . ಆಡಳಿತ ಮಂಡಳಿಯು ಈ ಸಿಬ್ಬಂದಿಯ ಹಿತ ರಕ್ಷಣೆಗೆ ಪ್ರಾಮುಖ್ಯತೆ ಕೊಡಬೆಕು . ಕಡ್ಡಾಯವಾಗಿ ಅವರುಗಲು ಮಾಸ್ಕ ಹಾಕಿಕೊಳ್ಳಬೇಕು. ಸಾಮಾನು ಬಿಡಿಸಿಕೊಳ್ಳುವ ಮೊದಲು ಹಾಗೂ ನಂತರ ಸ್ಯಾನಿಟರೈಜ್ ಮಾಡಿಕೊಳ್ಳಬೇಕು ಸಾದ್ಯವಿದ್ದಷ್ಟು ಹೊರಗಿನಿಂದ ಬರುವ ಜನರ ಸಂಖ್ಯೆ ಕಡಿಮೆ ಇರಲಿ. ಕಾರ್ಖಾನೆ ಅಥವಾ ನಿಮ್ಮ ಸಂಸ್ಥೆಗೆ ಬರುವ ಸಾಮಾನುಗಳನ್ನು ಹೊತ್ತು ತರುವ ವಾಹನವನ್ನು ಸ್ಯಾನಿಟರೈಜ್ ಮಾಡಿದ ಬಳಿಕವೇ ಮುಂದಿನ ಕೆಲಸ ಆರಂಭ ಮಾಡಬೇಕು.

# ಪ್ರಯಾಣದ ವಿಷಯಕ್ಕೆ ಸಲಹೆಗಳು : ಅನಿವಾರ್ಯವೆಂದರೆ ಮಾತ್ರ ಪ್ರಯಾಣ ಮಾಡಬೇಕು

1. ಅನಾವಶ್ಯಕ ಪ್ರಯಾಣವನ್ನು ರದ್ದು ಮಾಡಬೇಕು.

2. ಆರೋಗ್ಯ ಅಷ್ಟೊಂದು ಸರಿಯಾಗಿಲ್ಲದ ಕಾರ್ಮಿಕರು ಹಾಗೂ ನೌಕರರನ್ನು ಪ್ರಯಾಣ ಮಾಡದಂತೆ ತಡೆಯಬೇಕು .

3. ಅತೀ ಅವಶ್ಯಕವಿದ್ದಾಗ ಹೊರಗೆ ಹೋಗುವ ನೌಕರರು ಮಾಸ್ಕ್ ಧರಿಸಿ ಹಾಗೂ ಸ್ಯಾನಿಟೈಸರ್‌ನ ಬಾಟಲಿಯನ್ನು ಜೊತೆಗೆ ತೆಗೆದುಕೊಂಡು ಹೋಗವುದು.

4. ಪ್ರಯಾಣ ಮುಗಿಸಿ ಮರಳಿ ಬಂದ ನೌಕರರು ಕಾರ್ಮಿಕರು ಹಾಗೂ ಸಿಬ್ಬಂದಿಗಳು ಅನಾರೋಗ್ಯದಿಂದ ಬಳಲುತ್ತಿದ್ದರೆ ಕಾರ್ಯಸ್ಥಳಕ್ಕೆ ಬಾರದಂತೆ ತಡೆಯಬೇಕು. ಮನೆಯಲ್ಲಿಯೇ ಆರೈಕೆ ಮಾಡಿಕೊಳ್ಳಲು ತಿಳಿಸಿಕೊಡಬೇಕು.

## ಉಪಹಾರ ಗೃಹ: ಸಾಮಾಜಿಕ ಅಂತರ ಹಾಗೂ ಆರೋಗ್ಯ ರಕ್ಷಣೆಗೆ ಕ್ರಮ

1. ಸಾಮೂಹಿಕ ಭೋಜನವನ್ನು ಕೈಬಿಡಬೇಕು ಅದಕ್ಕೆ ಬದಲಾಗಿ ಪ್ಯಾಕ್ ಮಾಡಿದ ಊಟವನ್ನು ಪೂರೈಸಬೇಕು ನೌಕರರಿಗೆ ಊಟವನ್ನು ಮನೆಯಿಂದಲೇ ತೆಗೆದುಕೊಂಡುಬರಲು ಪ್ರೋತ್ಸಾಹಿಸಬೇಕು, ತಾವು ಕೆಲಸ ಮಾಡುವ ಡೆಸ್ಕ ಮೇಲೆ ಊಟ ಮಾಡಲು ಸೂಚಿಸಬೇಕು.

2. ಸಾಧ್ಯವಾದರೆ ಸ್ವಯಂ ಸೇವಾ ಪದ್ಧತಿಯನ್ನು ನಿಷೇಧಿಸಿ

3. ಉಪಯೋಗಿಸಿ ಎಸೆಯುವ ಪ್ಲೇಟು ಹಾಗೂ ಕಪ್ಪುಗಳನ್ನು ಬಳಸುವುದಕ್ಕೆ ಸೂಚಿಸುವುದು ಒಳಿತು ಮರು ಬಳಕೆ ಮಾಡುವ ಸಾಮಗ್ರಿಗಳನ್ನು ಸ್ವಚ್ಚವಾಗಿ ತೊಳೆಯಬೇಕು ಉಪಯೋಗಿಸಿದ ನೌಕರರೆ ಅವುಗಳನ್ನು ಸ್ವಚ್ಚಗೊಳಿಸುವುದು ಉತ್ತಮ

4. ಊಟದ ಸಮಯದಲ್ಲಿ ಊಟಕ್ಕೆ ಕುಳಿತುಕೊಳ್ಳುವ ನೌಕರರು ಕಾರ್ಮಿಕರು ಹಾಗೂ ಕೆಲಸಗಾರರು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಊಟದ ಮೇಜುಗಳ ಮದ್ಯದಲ್ಲಿ ಅಂತರವಿರಲಿ

5. ಗುಂಪಾಗಿ ಊಟಕ್ಕೆ ಸೇರುವುದು ಬೇಡ ಊಟ ಹಾಗೂ ಆಹಾರ ಪದಾರ್ಥಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವುದು ಬೇಡ

6. ಅಡುಗೆಯ ಪಾತ್ರೆ ಹಿಡಿಕೆಗಳನ್ನು ಒಬ್ಬರು ಹಿಡಿದಾದ ಮೇಲೆ ಇನ್ನೊಬ್ಬರು ಹಿಡಿಯುವುದಕ್ಕಿಂತ ಮೊದಲು ಸ್ಯಾನಿಟರೈಜ್ ಮಾಡಬೇಕು

7. ಅಡುಗೆಯ ಕೋಣೆಯನ್ನು ಕನಿಷ್ಟ ಪಕ್ಷ ದಿನಕ್ಕೆ ಎರಡು ಸಾರಿ ಸ್ಯಾನಿಟರೈಜ್ ಮಾಡಬೇಕು

## ಕೆಲಸಗಾರರು ವಾಸಿಸುವ ಸ್ಥಳ ಹಾಗೂ ವಾಹನಗಳ ಸ್ವಚ್ಚತೆ ಕೆಲಸದ ಸ್ಥಳಕ್ಕೆ ಹತ್ತಿರವಿರಲಿ ವಾಹನಗಳು ಸ್ವಚ್ಚವಾಗಿರಲಿ

1) ಸಾಧ್ಯವಿದ್ದರೆ ಕೆಲಸಗಾರರು ಕಾರ್ಖಾನೆ ಅಥವಾ ಕಛೇರಿಯಲ್ಲಿಯೇ ವಾಸಿಸುವುದಕ್ಕೆ ಅನುವು ಮಾಡಿಕೊಟ್ಟರೆ ಉತ್ತಮ ಅದು ಸಾಧ್ಯವಾಗದೇ ಇದ್ದರೆ ಹತ್ತಿರದಲ್ಲಿ ವಾಸಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು

2) ಸಾಧ್ಯವಾದರೆ ನೌಕರರು , ಕಾಮಿಕರು ಹಾಗೂ ಕೆಲಸಗಾರರನ್ನು ಕರೆತರಲು ಹಾಗೂ ಬಿಟ್ಟು ಬರಲು ವಾಹನಗಲ ವ್ಯೆವಸ್ಥೆ ಮಾಡಬೆಕು.

3) ವಾಹನ ಚಾಲಕರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಅವರ ದೇಹದ ತಾಪಮಾನವನ್ನು ಪರೀಕ್ಷಿಸುವ ವ್ಯೆವಸ್ಥೆಯಾಗಬೇಕು.

4) ಸಾರಿಗೆ ವಾಹನಗಳಲ್ಲಿಯೂ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು.

5) ಕೆಲಸಗಾರರು ಸಾರ್ವಜನಿಕ ವಾಹನಗಳಲ್ಲಿ ಬರುವುದನ್ನು ಪ್ರೋತ್ಸಾಹಿಸಬೇಡಿ. ಬೇಕಿದ್ದರೆ ನಡೆದುಕೊಂಡು ಇಲ್ಲವೇ ಬೈಸಿಕಲ್ ನಲ್ಲಿ ಬರಲಿ.

6) ಸಂದರ್ಭ ಬಂದಾಗ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಬಂದರೂ ಕಡ್ಡಾಯವಾಗಿ ಮಾಸ್ಕ ಧರಿಸುವ , ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಹಾಗೂ ವಾಹನದಿಂದ ಇಳಿದ ನಂತರ ಕಡ್ಡಾಯವಾಗಿ ಕೈತೊಳೆದುಕೊಳ್ಳಬೇಕು. ಈ ವಿಷಯವಾಗಿ ಕೆಲಸಗಾರರಿಗೆ ಸೂಚನೆ ಕೊಡಬೇಕು.

7) ಸಾಮೂಹಿಕವಾಗಿ ಕಾರುಗಳಲ್ಲಿ ಹೋಗಿ ಬರುವುದು ಬೇಡ. ಕೆಲಸದ ಮಧ್ಯ ಬಿಡುವಿನ ವೇಳೆಯಲ್ಲಿ ಹೊರಗೆ ಹೋಗಿ ಬರುವುದನ್ನು ನಿಷೇಧಿಸಿ.

## ಮಾನವ ಸಂಪನ್ಮೂಲ , ಸಹಕಾರ ನೀತಿ , ನೌಕರರ ಸುರಕ್ಷೆ ಹಾಗೂ ಸಾಮಾನ್ಯ ತಿಳುವಳಿಕೆ ಕಾರ್ಯ ಯೋಜನೆ.

1) ಮಾನವ ಸಂಪನ್ಮೂಲ ವಿಭಾಗವು ತನ್ನ ಆಡಳಿತಾತ್ಮಕ ವಿಷಯದಲ್ಲಿ ಬದಲಾವಣೆ ತರಬೇಕು. ಸಾಮೂಹಿಕ ಆರೋಗ್ಯ ರಕ್ಷಣೆಯತ್ತ ಗಮನ ಹರಿಸಬೇಕು. ತನ್ನ ಎಲ್ಲಾ ಕಾರ್ಮಿಕರು ನೌಕರರು ಹಾಗೂ ಕೆಲಸಗಾರರಿಗೆ ಇ ಎಸ್ ಐ ಸೌಲಭ್ಯ ಒದಗಿಸಬೇಕು

ಅದು ಅನ್ವಯವಾಗದಿದ್ದ ನೌಕರರಿಗೆ ಯಾವುದಾದರೂ ಆರೋಗ್ಯ ವಿಮೆಯನ್ನು ಮಾಡಿಸಬೇಕು.

2) ಕಂಪನಿ, ಕಾರ್ಖಾನೆ ಘಟಕ ಅಥವಾ ಸಂಸ್ಥೆಗೆ ಹತ್ತಿರದಲ್ಲಿರುವ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕು.

3) ಕೋವಿಡ್ 19 ಮಹಾಮಾರಿ ಖಾಯಿಲೆಗಾಗಿ ವಿಶೇಷ ರಜೆಯ ಸೌಲಭ್ಯ ಒದಗಿಸಬೇಕು.

4) ಕೆಲಸದ ಪರಿಸರದಲ್ಲಿ ನೌಕರರ ಹಾಗೂ ಕಾರ್ಮಿಕರ ಕಾರ್ಯಚಟುವಟಿಕೆ ತಿಳಿದುಕೊಳ್ಳಲು ಸಿಸಿಟಿವ್ಹಿ ಕ್ಯಾಮರಾ ವ್ಯವಸ್ಥೆ ಮಾಡಬೇಕು ಇದರಿಂದ ಬೇಜವಾಬ್ದಾರಿಯಿಂದ ನಡೆದುಕೊಳ್ಳುವ ನೌಕರರನ್ನು ಗುರುತಿಸಲು ಅನುಕೂಲವಾಗುತ್ತದೆ. ಹಲವು ಬಾರಿ ಎಚ್ಚರಿಕೆ ಕೊಟ್ಟ ಮೇಲೆಯೂ ತಮ್ಮ ನಡುವಳಿಕೆಯಲ್ಲಿ ಸುಧಾರಣೆ ತಂದು ಕೊಳ್ಳದ ನೌಕರರ ವಾರ್ಷಿಕ ಗೋಪನೀಯ ವರದಿಯಲ್ಲಿ ಅದನ್ನು ಉಲ್ಲೇಖಿಸಬಹುದು.

5) ಕೋವಿಡ್ 19 ಮಹಾಮಾರಿಯ ಗಂಭೀರತೆಯನ್ನು ತಿಳಿಸುವ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ತರಬೇತಿಯು ಸರಳ ಭಾಷೆಯಲ್ಲಿರಲಿ ತರಬೇತಿಗೆ ಬಳಸುವ ಸಾಮಗ್ರಿಗಳು ತುಂಬಾ ಸುಲಭವಾಗಿ ಅರ್ಥವಾಗುವಂತಿರಬೇಕು . ಪೋಸ್ಟರ್‌ಗಳು , ಧ್ವನಿ ಸುರುಳಿಗಳು ಹಾಗೂ ದೃಶ್ಯ ಮಾಧ್ಯಮದ ಸಲಕರಣೆಗಳನ್ನು ಉಪಯೋಗಕ್ಕೆ ತರಬೇಕು. ತುರ್ತು ಸಂದರ್ಭದಲ್ಲಿ ಸಂಪರ್ಕಿಸಬೇಕಾದ ಸರಕಾರಿ ಸಹಾಯವಾಣಿಯನ್ನು ಪರಿಸರದ ಗೋಡೆಯ ಮೇಲೆ ಸೂಚಿಸಬೇಕು. ಹತ್ತಿರದ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವಿಳಾಸವನ್ನು ಸೂಚನಾ ಫಲಕದಲ್ಲಿ ಬಿಂಬಿಸಬೇಕು

6) ಕೋವಿಡ್ 19 ಮಹಾಮಾರಿಗೆ ಸಂಬಂದ ಪಟ್ಟಂತೆ ಅತೀವ ಮಾನಸಿಕ ಒತ್ತಡಕ್ಕೆ ಒಳಗಾಗದಂತೆ , ಗಾಬರಿಯಾಗದಂತೆ , ಭಯಬೀತರಾಗದಂತೆ ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವಾಗಬೇಕು . ಸಾಮಾಜಿಕ ಜಾಲತಾಣ ಹಾಗೂ ಖಾಸಗಿ ಸುದ್ದಿ ಮಾಧ್ಯಮದಲ್ಲಿ ಬರುವ ವರದಿಗಳನ್ನು ನಂಬಿ ಮಾನಸಿಕ ಸ್ವಾಸ್ಥ್ಯವನ್ನು ನೌಕರರು ಕಳೆದುಕೊಳ್ಳುವುದು ಬೇಡ. ಧೈರ್ಯ, ಸಾಹಸ , ಹಾಗೂ ಏಕ ಚಿತ್ತತೆಯಿಂದ ನಗು ನಗುತ್ತಾ ಇರುವಂತಹ ವಾತಾವರಣ ಸೃಷ್ಟಿಸಬೇಕು

7) ದಿನದ ಕೊನೆಯಲ್ಲಿ ಮನೆಗೆ ತೆರಳುವಾಗ ನೌಕರರು ತಮ್ಮ ಹಿರಿಯ ಅಧಿಕಾರಿಗಳಿಗೆ ತಾವು ಆರೋಗ್ಯದಿಂದ ಇರುವುದನ್ನು ತಿಳಿಸಿ ಹೋಗುವ ವ್ಯವಸ್ಥೆಯಾಗಬೇಕು ಇದರಿಂದ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದರೆ ಗುರುತಿಸುವುದಕ್ಕೆ ಅನುಕೂಲವಾಗುತ್ತದೆ.

8) ಸುಲಭವಾಗಿ ಕೋವಿಡ್ 19 ಮಹಾಮಾರಿ ಖಾಯಿಲೆಗೆ ಒಳಗಾಗಬಹುದಾದ ನೌಕರರ ಒಂದು ಸೂಚಿಯನ್ನು ಸಿದ್ದ ಪಡಿಸಿಕೊಳ್ಳಬೇಕು ಗರ್ಭಿಣಿಯರು ಹಾಗೂ ಪುಟ್ಟ ಮಕ್ಕಳ ತಾಯಂದಿರ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಸಾದ್ಯವಿದ್ದಷ್ಟು ಅವರಿಗೆ ಸುಲಭವಾದ ಕೆಲಸವನ್ನು ನೀಡಬೇಕು. ಅವರು ಬೇರೆಯವರ ಸಂಪರ್ಕಕ್ಕೆ ಬಾರದೇ ಇರುವಂತಹ ಕೆಲಸ ಕೊಡಬೇಕು ಒಟ್ಟಾರೆ ಅವರ ಬಗ್ಗೆ ವಿಶೇಷ ಕಾಳಜಿ ಇರಲಿ.

9) ಕಾರ್ಯ ಸ್ಥಳ ಹಾಗು ಪರಿಸರದಲ್ಲಿ ಗುಟಕಾ, ತಂಬಾಕು, ಪಾನ ಮಸಾಲಾ ಹಾಗೂ ಸಿಗರೇಟುಗಳನ್ನು ಉಪಯೋಗಿಸುವುದನ್ನು ನಿಷೇಧಿಸಬೇಕು. ಧೂರ್ಮಪಾನವನ್ನು ಮಾಡಲೇಬಾರದಂತೆ ಸೂಚಿಸಬೇಕು.

10) ಕಾರ್ಯಸ್ಥಳ, ಕಾರ್ಖಾನೆ, ಮಾರಾಟ ಮಳಿಗೆ ಹಾಗೂ ಸಂಸ್ಥೆಯ ಪರಿಸರದಲ್ಲಿ ಕೋವಿಡ್ 19 ಮಹಾಮಾರಿಗೆ ಬಲಿಯಾದವರ ಸಂಖೆಯನ್ನು ಪ್ರತಿದಿನ ಸೂಚನಾ ಫಲಕದಲ್ಲಿ ಬಿತ್ತರಗೊಳ್ಳಲಿ ಇದರಿಂದ ಈ ಮಹಾ ಮಾರಿಯ ಗಂಭೀರತೆ ನೌಕರರ ಗಮನಕ್ಕೆ ಬರುತ್ತದೆ. ಸಂಸ್ಥೆಯು ಆಯೋಜಿಸುವ ಯಾವುದೇ ತರಬೇತಿಯಲ್ಲಿ ಪಠ್ಯದ ಒಂದು ಭಾಗವಾಗಿ ಕೋವಿಡ್ 19 ಮಹಾಮಾರಿಯು ಒಂದು ವಿಷಯದ ರೂಪದಲ್ಲಿ ಕಲಿಸುವ ವ್ಯೆವಸ್ಥೆಯಾಗಲಿ. ಇದರಿಂದ ಸಾಮೂಹಿಕವಾಗಿ ಈ ಖಾಯಿಲೆಯನ್ನು ಬೇರು ಸಮೇತ ಕಿತ್ತೆಸೆಯಲು ಅನುಕೂಲವಾಗುತ್ತದೆ.

11) ಸಂಸ್ಥೆ ಅಥವಾ ಕಾರ್ಖಾನೆಯಲ್ಲಿ ಕೋವಿಡ್ 19 ಮಹಾಮಾರಿಯನ್ನು ತಡೆಗಟ್ಟಲು ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆ ಕುರಿತಾಗಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

12) ಎಲ್ಲ ನೌಕರರು , ಸಿಬ್ಬಂದಿ , ಕಾರ್ಮಿಕರು ಹಾಗೂ ಕೆಲಸಗಾರರು ಆರೋಗ್ಯ ಸೇತು ಆ್ಯಪ್ ಹೊಂದುವುದನ್ನು ಕಡ್ಡಾಯಗೊಳಿಸಬೇಕು.

13) ನೌಕರರು ಅಧಿಕಾರಿಗಳು ಅಧೀಕ್ಷಕರು ದೂರವಾಣಿ, ಇನ್‌ಟರನೆಟ್ ಹಾಗೂ ಇನ್ನೀತರ ಮಾದ್ಯಮಗಳ ಮುಖಾಂತರ ಒಬ್ಬರಿಗೊಬ್ಬರು ಸಂಪರ್ಕದಲ್ಲಿ ಇರಲಿ ಇದರಿಂದ ದಿನದ ಬೆಳವಣಿಗೆ ತಿಳಿದುಕೊಳ್ಳಲು ಸಹಕಾರಿ ಯಾಗುತ್ತದೆ.

## ವೈಯುಕ್ತಿಕ ಸುರಕ್ಷಾ ಕವಚ

ನೌಕರರು, ಸಿಬ್ಬಂದಿಯುವರು , ಕೆಲಸಗಾರರು ಹಾಗೂ ಕಾರ್ಮಿಕರು ಕೋವಿಡ್ 19 ಮಹಾಮಾರಿಯಿಂದ ರಕ್ಷಣೆ ಪಡೆದುಕೊಳ್ಳಲು ಕೆಲವೊಂದು ರಕ್ಷಾ ಕವಚಗಳಾದ ಪಿ, ಪಿ ಈ , ಗ್ಲಾಜ್, ಕನ್ನಡಕ , ಮುಖಕವಚ , ಗೌನು, ಸರ್ಜಿಕಲ್ ಮಾಸ್ಕ , ಎನ್ 95 ಮಾಸ್ಕ , ಎಫ ಎಸ್ ಪಿ 2 ಕೆ ಎನ್ 95 ಮುಂತಾದವುಗಳನ್ನು ಒಬ್ಬರು ಬಳಸಿರುವುದನ್ನು ಇನ್ನೊಬ್ಬರು ಬಳಸುವುದು ಬೇಡ. ಈ ವಿಷಯವಾಗಿ ಆರೋಗ್ಯ ಮತ್ತು ಕುಟುಂಬ ಇಲಾಖೆ , ರಾಜ್ಯ ಸರ್ಕಾರ, ಎ ಎಸ್ ಎಸ್ , ಸಿ ಎ ಎಚ್, ಎಫ ಪಿ ಸಿ ಸಿ, ಸಿ ಆಯ್ ಆಯ್ , ಪಿ ಎಚ್ ಡಿ ಸಿ ಸಿ ಆಯ್ ಹಾಗೂ ಎನ್ ಎ ಎಸ್ ಎಸ್ ಮುಖಾಂತರ ಬರುವ ಸೂಚನೆಗಳನ್ನು ತಪ್ಪದೇ ಪಾಲಿಸಬೇಕು ಬಳಸಲ್ಪಡುವ ಎಲ್ಲಾ ವೈಯುಕ್ತಿಕ ಸುರಕ್ಷಾ ಕವಚಗಳು ಕೆಳಗೆ ಕಾಣಿಸಿದ ಸೂಚನೆಗಳನ್ನು ಹೊಂದಿರಬೇಕು.

ಕ) ಕಾಮಿಕರು ಅಪಾಯಕ್ಕೆ ಸಿಲುಕದಂತೆ ಕಾಪಾಡುವ ಕ್ಷಮತೆ ಹೊಂದಿರಬೇಕು.

ಖ) ಉಡುಪುಗಳು ಬಿಸಿಯಾಗಿರಲಿ

ಗ) ಅವಶ್ಯತೆಗೆ ತಕ್ಕಂತೆ ಬದಲಿಸುವ , ಸ್ವಚ್ಚಗೊಳಿಸುವ ಹಾಗೂ ಪುನಃ ಬಳಸುವಂತಿರಬೇಕು.

ಘ) ಮಹಾಮಾರಿಯು ಹರಡದಂತೆ ಆವರಣ ಕವಚಗಳನ್ನು ಬಿಸಿ ಮಾಡುವ ತೆಗೆದು ಹಾಕುವ ಸ್ಯಾನಿಟರೈಜ್ ಮಾಡುವ ವ್ಯೆವಸ್ಥೆ ಬಹಳ ಮುಖ್ಯವಾದುದು. ವಯಕ್ತಿಕ ಸುರಕ್ಷಾ ಕವಚಗಳು ಗುಣಮಟ್ಟ ಹೊಂದಿರಬೇಕು ಅವುಗಳಿಂದ ಕೆಲಸಗಾರರಿಗೆ ಅನುಕೂಲವಾಗಬೇಕು.

## ಕಾರ್ಯಸ್ಥಳದಲ್ಲಿ ಅಪಾಯದ ಪರಿಮಾಣ ಕಾರ್ಯಸ್ಥಳದ ಪರಿಸರ ರೋಗಾಣುಗಳು ಹರಡದಂತೆ ನೋಡಿಕೊಳ್ಳುವ ಆರೋಗ್ಯಕರ ವಾತಾವರಣವಿರಲಿ

ಆಡಳಿತ ಮಂಡಳಿಯು ತಮ್ಮ ಅಧೀನದಲ್ಲಿ ಕೆಲಸ ಮಾಡುವ ಕಾರ್ಮಿಕರು , ಅಧಿಕಾರಿಗಳು ಹಾಗೂ ನೌಕರರು ಆರೋಗ್ಯದಿಂದ ಇರುವಂತೆ ನೋಡಿಕೊಳ್ಳಬೇಕು ಕೋವಿಡ್ 19 ಮಹಾಮಾರಿಯ ಅಪಾಯವನ್ನು ಅರಿತು ಎಚ್ಚರಿಕೆಯಿಂದ ಕೆಲಸ ಮಾಡಬೇಕು ಸೋಂಕು ಹರಡದಂತೆ ಕಾರ್ಯಯೋಜನೆ ಹಾಕಿಕೊಳ್ಳಬೇಕು.

## ಅಪಾಯದ ಪರಿಮಾಣ ಕಡಿಮೆ ಇರುವ ಕ್ಷೇತ್ರ

ಕಛೇರಿ, ಸಂಸ್ಥೆ , ಕಾರ್ಖಾನೆ ಹಾಗೂ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಕೋವಿಡ್ 19 ಮಹಾಮಾರಿ  ಖಾಯಿಲೆಗೆ ತುತ್ತಾಗುವ ಸಾಧ್ಯತೆ ತುಂಬಾ ಕಡಿಮೆ ಉದಾಹರಣೆಗೆ ಮನೆಯಿಂದ ಕೆಲಸ ಮಾಡುವ , ಸಾರ್ವಜನಿಕರ ಸಂಪರ್ಕಕ್ಕೆ ಬಾರದೇ ಕೆಲಸಮಾಡುವ , ಸಹಕಾರ್ಯಕರ್ತರಿಲ್ಲದೇ ಕೆಲಸ ನಿರ್ವಹಿಸುವ ನೌಕರರು ಈ ಮಹಾ ಮಾರಿಯ ಸೋಂಕಿಗೆ ತಗಲುವ ಪ್ರಮಾಣ ತುಂಬಾ ಕಡಿಮೆ

## ಮದ್ಯಮ ತರಗತಿಯ ಅಪಾಯಕಾರಿ ಕ್ಷೇತ್ರ

ಸಾಮಾನ್ಯವಾಗಿ ಸಹ ಕೆಲಸಗಾರರ ಸಂಪರ್ಕಕ್ಕೆ ಬರುವ , ಗುತ್ತಿಗೆದಾರರು , ಸಾರ್ವಜನಿಕರು , ಒಬ್ಬರು ಇನ್ನೊಬ್ಬರ ಮದ್ಯ ಎರಡು ಮೀಟರ ಅಂತರ ಕಾಯ್ದುಕೊಳ್ಳದವರು ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಬಸ್ಸು ಹಾಗು ರೈಲು ನಿಲ್ದಾಣಗಳಲ್ಲಿ ಕೆಲಸ ಮಾಡುವ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಉಪಹಾರ ಮಂದಿರ ಮತ್ತು ವಸತಿ ಗೃಹಗಳಲ್ಲಿ ಕಾರ್ಯ ಮಾಡುವ , ಪೋಲೀಸರು ಹಾಗೂ ಸುರಕ್ಷಾ ಸಿಬ್ಬಂಧಿಗಳು ಈ ಶ್ರೇಣಿಯಲ್ಲಿ ಬರುತ್ತಾರೆ.

## ಹೆಚ್ಚು ಅಪಾಯಕಾರಿ ಪ್ರಮಾಣ ಇರುವ ಸ್ಥಳದಲ್ಲಿ

ಜನರು ಒಬ್ಬರಿಗೊಬ್ಬರು  ನಿಕಟವಾಗಿ ಸಂಪರ್ಕಕ್ಕೆ ಬರುವವರು ಸಾಮಾನ್ಯವಾಗಿ ಕೋವಿಡ್ 19 ಸೋಂಕಿಗೆ ಒಳಪಡುವ ಹೆಚ್ಚು ಅಪಾಯವನ್ನು ಹೊಂದಿರುತ್ತಾರೆ. ವಿಶೇಷವಾಗಿ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ವೈದ್ಯಕೀಯ ಪ್ರಯೋಗಾಲಯ, ಸ್ವಚ್ಚತಾ ಕಾರ್ಯದಲ್ಲಿ ತೊಡಗಿರುವವರು ಈ ಶ್ರೇಣಿಯಲ್ಲಿ ಬರುತ್ತಾರೆ. ಕೋವಿಡ್ 19 ಮಹಾಮಾರಿಗೆ ಒಳಗಾಗಿ ಆರೈಕೆ ಪಡೆದುಕೊಳ್ಳುತ್ತಿರುವ ರೋಗಿಗಳು ವಾಸ ಮಾಡುತ್ತಿರುವ ವಾರ್ಡಿನಲ್ಲಿ ದುರಸ್ಥಿ ಕೆಲಸ ಮಾಡುವ ಕಾರ್ಪೆಂಟರ್ ಕೆಲಸ ಮಾಡುವ ವಿಧ್ಯುತ್ ದುರಸ್ಥಿ ಕೆಲಸ ಮಾಡುವ ಕಾರ್ಮಿಕರು ಕೋವಿಡ್ 19 ಮಹಾಮಾರಿ ಸೋಂಕಿಗೆ ಸಿಲುಕುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.

## ಅಪಾಯದ ಪ್ರಮಾಣ ಕಡಿಮೆ ಇರುವ ಸ್ಥಳದಲ್ಲಿ ಅಪಾಯವನ್ನು ತಡೆಗಟ್ಟಲು ಕಾರ್ಯ ಯೋಜನೆ

ಸಂಕ್ರಮಣ ಹರಡುವ ಪ್ರಮಾಣ ಕಡಿಮೆ ಇರುವ ಸ್ಥಳಗಳಲ್ಲಿ ಕೆಲಸ ಮಾಡುವ ಕೆಲಸಗಾರರು, ಕಾರ್ಮಿಕರು, ನೌಕರರು ಹಾಗೂ ಸಿಬ್ಬಂಧಿಗಳಿಗೆ ವಯಕ್ತಿಕ ರಕ್ಷಣಾ ಕವಚದ ಅವಶ್ಯಕತೆ ಇರುವುದಿಲ್ಲ ಆದರೂ ಮಾಸ್ಕನ್ನು ಕಡ್ಡಾಯವಾಗಿ ಧರಿಸಬೇಕು ಹಾಗೂ ಸರಕಾರದ ನಿಯುಮಗಳನ್ನು ಪಾಲಿಸಬೇಕು. ಮದ್ಯಮ ಪ್ರಮಾಣದ ಅಪಾಯ ಇರುವಲ್ಲಿ ನೌಕರರು ಆದಷ್ಟು ಕಡಿಮೆ ಪ್ರಮಾಣದಲ್ಲಿ ಒಬ್ಬರಿಗೊಬ್ಬರು ಬೇಟಿಯಾಗಲಿ ಆದರೂ ಕೂಡಾ ಎರಡು ಮೀಟರ್ ಅಂತರ ಕಾಪಾಡಿಕೊಳ್ಳಬೇಕು ಒಬ್ಬರಿಗೊಬ್ಬರು ಮುಟ್ಟುವುದನ್ನು ಸಂಪೂರ್ಣ ನಿಷೇಧಿಸಬೇಕು ಒಂದು ಪಾಳಯದಲ್ಲಿ ಬರುವವರು ಅದೇ ಪಾಳಯದಲ್ಲಿ ಬರುವಂತೆ ನೋಡಿಕೊಳ್ಳಬೇಕು ಮೇಲಿಂದ ಮೇಲೆ ಅವರ ಪಾಳಯ ಬದಲಿಸುವುದು ಬೇಡ ಅವರು ಕೆಲಸ ಮಾಡುವ ಯಂತ್ರಗಳನ್ನು ಸ್ಯಾನಿಟರೈಜ್ ಮಾಡಬೇಕು ನೈಸರ್ಗಿಕ ಗಾಳಿ ಬೀಸುವಂತೆ ನೋಡಿಕೊಳ್ಳಬೇಕು ಇದರಿಂದ ಕೋವಿಡ್ 19 ಲಕ್ಷಣ ಹೊಂದಿದ ವ್ಯೆಕ್ತಿಯು ಅಲ್ಲಿ ಇದ್ದರೆ ಅವನ ಉಸಿರಾಟದ ಗಾಳಿ ಜೊತೆಯಲ್ಲಿ ಕೆಲಸ ಮಾಡುವ ಸಹಪಾಠಿಗಳಿಗೆ ತಗುಲುವುದು ಬೇಡ  ಮಾಸ್ಕ ಧರಿಸುವುದು ಕಡ್ಡಾಯವಾಗಿರಬೇಕು ಮದ್ಯಮ ಪ್ರಮಾಣದ ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರು ಕೆಲಸ ಆರಂಭ ಮಾಡುವ ಪೂರ್ವದಲ್ಲಿ ಮುಖಕ್ಕೆ ಮಾಸ್ಕ ಕೈಗಳಿಗೆ ಗ್ಲೌಜ್ , ಗೌನು , ಕನ್ನಡಕ ಒಟ್ಟಾರೆ ಅವರಿಗೆ ನಿಗಧಿ ಪಡಿಸಿದ ಕೆಲಸಕ್ಕೆ ತಕ್ಕಂತೆ ರಕ್ಷಾ ಕವಚವನ್ನು ಧರಿಸಬೇಕು . ಮದ್ಯಮ ಪ್ರಮಾಣದ ಅಪಾಯಕಾರಿ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ದಿನಕ್ಕೆ ಎರಡು ಸಾರಿ ತಮ್ಮ ಕಾರ್ಯಸ್ಥಳವನ್ನು ಸ್ವಚ್ಚಗೊಳಿಸಿಕೊಳಳ್ಳಬೇಕು. ಈ ವಿಷಯುವಾಗಿ ಆಡಳಿತ ಮಂಡಳಿಯು ತರಬೇತಿ ಕೊಡಬೇಕು ಸ್ವಚ್ಚಗೊಳಿಸುವ ಸಾಧನ ಸಲಕರಣೆಗಳನ್ನು ಪೂರೈಸಬೇಕು

## ಹೆಚ್ಚು ಅಪಾಯಕಾರಿ ಪ್ರಮಾಣ ಇರುವ ಸ್ಥಳದಲ್ಲಿ

ಹೆಚ್ಚು ಅಪಾಯಕಾರಿ ಪ್ರಮಾಣ ಇರುವ ಸ್ಥಳದಲ್ಲಿ ಕೆಲಸ ಮಾಡುವ ನೌಕರರನ್ನು ವಿಶೇಷ ಶ್ರೇಣಿಯಲ್ಲಿ ಪರಿಗಣಿಸಬೇಕು ಇವರು ಸಾಮಾನ್ಯವಾಗಿ ಆಸ್ಪತ್ರೆ , ಶವಾಗಾರ, ವೈದ್ಯಕೀಯ ಪ್ರಯೋಗಾಲಯ , ಅಂಬುಲೆನ್ಸ ಹಾಗೂ ಶವ ಯಾತ್ರೆಗೆ ಉಪಯೋಗಿಸುವ ವಾಹನಗಳಲ್ಲಿ ಕೆಲಸ ಮಾಡುವ ನೌಕರರು ಈ ಶ್ರೇಣಿಯಲ್ಲಿ ಬರುತ್ತಾರೆ  ಇವರು ವಿಶೇಷ ಶ್ರೇಣಿಯಲ್ಲಿ ಬರುವುದರಿಂದ ಆಡಳಿತ ವರ್ಗವು ಇವರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿವಹಿಸಬೇಕಾಗುತ್ತದೆ. ಹೀಗಾಗಿ ಇವರಿಗೆ ಉತ್ತಮ ದರ್ಜೆಯ ರಕ್ಷಾಕವಚಗಳನ್ನು ಪೂರೈಸಬೇಕು ಇದಕ್ಕಾಗಿ ಸರಕಾರ ನಿರ್ಧರಿಸಿರುವ ಮಾರ್ಗೋಪಾಯಗಳನ್ನು ಪಾಲಿಸಬೇಕು. ಕೋವಿಡ್ 19 ಮಹಾಮಾರಿಗೆ ತುತ್ತಾದ ರೋಗಿಗಳು ವಾಸಿಸುತ್ತಿರುವ ಕೊಠಡಿಗಳಿಗೆ ನೀರು ಸರಬರಾಜು ಮಾಡುವ , ವಿದ್ಯುತ್

ದುರಸ್ತಿ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ ಅವರ ಕೆಲಸಗಳನ್ನು ಆಧರಿಸಿ ರಕ್ಷಾ ಕವಚಗಳನ್ನು ಪೂರೈಸಬೇಕು ಅವರು ಮೂರು ಪದರಿನ ಮಾಸ್ಕ ಮುಖಮಾಸ್ಕ ಎನ್ 95 ಉಪಕರಣ , ಕೈಗವಸು, ಕನ್ನಡಕ, ಗೌನ್ (ರೋಗಿಯ ಸಾಮಿಪ್ಯದಲ್ಲಿ ಬರುವ ಅವಧಿಯನ್ನು ಆಧರಿಸಿ) ಮುಂತಾದ ಕವಚಗಳನ್ನು ಕಡ್ಡಾಯವಾಗಿ ಕೊಡಬೇಕು .

ಸಂಕ್ರಮಣ ಹರಡುವ ಸಾಧ್ಯತೆಗೆ ತುತ್ತಾಗ ಬಹುದಾದ ನೌಕರರನ್ನು ಅಂತಹ ಕೆಲಸಕ್ಕೆ ಉಪಯೋಗಿಸುವುದನ್ನು ತಡೆಯುವುದು ಒಳ್ಳೆಯದು. ಆಡಳಿತ ಮಂಡಳಿಯು ಮುಖ್ಯವಾಗಿ ಕೋವಿಡ್ 19 ಮಹಾಮಾರಿಯ ಲಕ್ಷಣ ಕಂಡು ಬಂದಿರುವ ಕಾರ್ಮಿಕರನ್ನು ಗುರುತಿಸಿ ತಕ್ಷಣ ಆಸ್ಪತ್ರೆಗೆ ದಾಖಲು ಮಾಡಬೇಕು ಒಂದು ವೇಳೆ ಯಾವುದೇ ನೌಕರ ಮಾಸ್ಕ ಧರಿಸದೇ ಇದ್ದರೇ ತಕ್ಷಣ ಅವರಿಗೆ ಮಾಸ್ಕ ಪೂರೈಸಬೇಕು. ಲಕ್ಷಣ ಕಂಡುಬಂದ ನೌಕರರನ್ನು ತಡ ಮಾಡದೇ ಆಸ್ಪತ್ರೆಗೆ ಕಳುಹಿಸಬೇಕು ಅಲ್ಲಿಯವರೆಗೆ ಅವರು ಬೇರೆಯವರ ಸಂಪರ್ಕಕ್ಕೆ ಬಾರದಂತೆ ತಡೆಯಬೇಕು ಅಂದರೆ ಅವರು ಉಸಿರಾಡುವ ಉಸಿರು ಬೇರೆಯವರಿಗೆ ಹರಡಬಾರದು. ಸ್ಥಳಾಂತರಿಸುವ ವ್ಯವಸ್ಥೆಯಾಗುವವರೆಗೆ ಅವರು ಬಯಲಿನಲ್ಲಿ ನಿಂತುಕೊಳ್ಳಲಿ. ಕೋವಿಡ್ 19 ಖಾಯಿಲೆಗೆ ತುತ್ತಾಗಿ ಆರೈಕೆ ಮಾಡಿಕೊಳ್ಳುತ್ತಿರುವ ರೋಗಿಯ ಕೊಠಡಿಯನ್ನು ಸ್ವಚ್ಚಗೊಳಿಸುವಾಗ ರೋಗಿಯು ಹೊರಗೆ ಹೋಗುವುದು ಬೇಡ. ಅವರು ನಡೆದಾಡಿದ ನೆಲವನ್ನು ಸಾಬೂನು ಪುಡಿಯ ನೀರಿನಿಂದ ಸ್ವಚ್ಚ ಮಾಡಬೇಕು.

## ಆಡಳಿತ ಮಂಡಳಿಯು ತೆಗೆದುಕೊಳ್ಳಬೇಕಾದ ಕ್ರಮಗಳು

1) ಹೆಚ್ಚು ಅಪಾಯಕಾರಿ ವಲಯವನ್ನು ಗುರುತಿಸಿ ಪಿ.ಪಿ.ಇ. ಕಿಟ್ ನೀಡುವುದು.
2) ಮನೆಯಿಂದಲೇ ಆಹಾರ ತಂದು ಕಾರ್ಯಸ್ಥಳದಲ್ಲಿಯೇ ಊಟ ಮಾಡುವಂತೆ ನೋಡಿಕೊಳ್ಳುವುದು.
3) ಸಾಧ್ಯವಾದಷ್ಟು ಕಛೇರಿಯಲ್ಲಿಯೇ ವಾಸಿಸಲು ಅವಕಾಶ ಕಲ್ಪಿಸುವುದು.
4) ಸುರಕ್ಷಾ ವಾಹನ ವ್ಯವಸ್ಥೆ ಮಾಡಬೇಕು.
5) ಕೋವಿಡ್–19 ಖಾಯಿಲೆಯಿಂದ ಬಳಲುತ್ತಿರುವವರಿಗೆ ವಿಶೇಷ ರಜೆ ನೀಡಬೇಕು.